ಶ್ರೀ ಪಿ.ಜಿ.ಆರ್. ಸಿಂಧ್ಯ.—ಲಕ್ಷ್ಮೀಸಾಗರ್ ಅವರು ಹೌಸಿಂಗ್ ಮಿನಿಸ್ಟ್ರಾಗಿದ್ದರು. ಆ ಸಮಯದಲ್ಲಿ ಅವರು ಮಾಡಿದ್ದರೆನ್ನಿಸುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಷೇಮ್. ಷೇಮ್.

SRI P.G. R. SINDHIA.—Without knowing the things you should not speak like that.

SRI S. BANGARAPPA.—I know the matter. I have gone through the records also. She has discussed with me. If you fix a debate on that I am prepared to participate

ಶ್ರೀ ಪಿ. ಜಿ. ಆರ್. ಸಿಂಧ್ಯ.—ವಿಷಯ ಗೊತ್ತಿಲ್ಲದೆಯೇ ವಿರೋಧ ಪಕ್ಷದ ನಾಯಕರಂ ಷೇಮ್ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಆ ವಿಷಯ ನನಗೆ ಗೊತ್ತಿದೆ. ಮಾನ್ಯ ಸದಸ್ಯರಿಯವರಂ ನನ್ನ ಬಳಿ ಇದನ್ನು ಡಿಸ್ಕಷನ್ ಮಾಡಿದ್ದಾರೆ. ರೆಕಾರ್ಡ್ಸ್ ಎಲ್ಲ ನೋಡಿದ್ದೇನೆ. ಡಿಸ್ಕಷನ್‌ಗೆ ನಾನು ರೆಡಿ.

ಅಧ್ಯಕ್ಷರಂ.—ಬೇಕಾದರೆ ಅರ್ಧ ಗಂಟೆ ಡಿಸ್ಕಷನ್‌ಗೆ ಇಟ್ಟುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅಧ್ಯಕ್ಷರೇ, ಹೌಸಿಂಗ್ ಬೋರ್ಡ್ ಮನೆಗಳನ್ನು ಲಾಟರಿ ಮೂಲಕ ಅಲಾಟ್ ಮಾಡುತ್ತಾರೆ, ಡಿಸ್ಟ್ರಿಕ್ಟಿನವರಿ ಕೋಟಾದಲ್ಲಿ ಎಲಿಜಿಬಿಲಿಟಿ ಆರ್ಜಿಗಳನ್ನು ಬಿಟ್ಟಿ ಬೇರೆಯವರಿಗೆ ಮಾಡಿದ್ದರೆ ನಾನು ಕಮ ಕೈಗೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಹೇಳಿದ್ದೇನೆಂದರೆ ಮೈಸೂರಿನ ಮೇಯರ್‌ರವರು ತಮ್ಮ ಪಕ್ಷದವರಿಗೆ ೪, ೬, ೮ ಮನೆಗಳನ್ನು ಕೊಟ್ಟಿದ್ದಾರೆ ಎಂಬುದು ನೀವು ಇಂಟರ್‌ವೀನ್ ಆಗಿದ್ದೀರೆಂದು ಅವರು ಹೇಳುತ್ತಿಲ್ಲ.

ಅಧ್ಯಕ್ಷರು.—ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿದ್ದಾರಲ್ಲ ಬಿಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇದಕ್ಕೆ ಅರ್ಧ ಗಂಟೆ ಡಿಸ್ಕಷನ್ನೂ ಬೇಡ, ಏನೂ ಬೇಡ. ನಾನೇ ಈಗ ಅವರ ಡೌಟನ್ನು ಕ್ಲಿಯರ್ ಮಾಡಿಸುತ್ತೇನೆ. ನಾನು ಹೇಳುವುದು ಹೌಸಿಂಗ್ ಬೋರ್ಡ್ ಮನೆಗಳ ಬಗ್ಗೆ. ಅವರು ಹೇಳುತ್ತಿರುವುದು ಸಿಐಟಿಬಿಯವರು ಕಟ್ಟಿಸಿರುವ ಮನೆಗಳದ್ದು. ಸಿಐಟಿಬಿದ್ದು ನನಗೆ ಗೊತ್ತಿಲ್ಲ. ಹುಡ್ಕೊದವರು ಸಿಐಟಿಬಿಯವರಿಗೂ ದುಡ್ಡು ಕೊಟ್ಟಿದ್ದಾರೆ. ಆದ್ದರಿಂದ ಇದು ನನ್ನ ಖಾತೆಗೆ ಬರುವುದಿಲ್ಲ.

ಬೆಂಗಳೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ತಾರಾ ಮಂಡಲದ ಕಟ್ಟಡದ ಬಗ್ಗೆ

೮೬೯ ಶ್ರೀ ಮಲ್ಲಾರಿ ಗೌಡ. ಎಸ್. ಪಾಟೀಲ್. (ಸಂಕೇಶ್ವರ).—ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ತಾರಾಮಂಡಲಕ್ಕಾಗಿ ಮಾಸಲಾಗಿಟ್ಟಿರುವ ಒಟ್ಟಾರೆ ಹಣಕಾಸಿನ ಮೊತ್ತವೆಷ್ಟು ?

ಆ) ಯಾವ ಇಲಾಖೆಯಿಂದ ತಾರಾಮಂಡಲದ ನಿರ್ಮಾಣದ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ.

ಇ) ಬೆಂಗಳೂರು ನಗರಸಭೆಯವರು ಇದಕ್ಕಾಗಿ ನೀಡಿರುವ ಹಣವೆಷ್ಟು ?

ಈ) ತಾರಾಮಂಡಲದ ನಿರ್ಮಾಣಕ್ಕಾಗಿ ಕೊಟ್ಟಿರುವ ಸ್ಥಳದ ಕ್ಷೇತ್ರವೆಷ್ಟು ಹಾಗೂ ಅದರ ಬೆಲೆಯೆಷ್ಟು ?

ಉ) ಸರ್ಕಾರದಿಂದ ಇದಕ್ಕಾಗಿ ಕೊಟ್ಟಿರುವ ಹಣವೆಷ್ಟು ?

ಶ್ರೀ ಎ. ಲಕ್ಷ್ಮೀಸಾಗರ (ಕಾನೂನು ಹಾಗೂ ನಗರಾಭಿವೃದ್ಧಿ ಸಚಿವರು).—

ಅ) ೧೬೯.೩೦ ಲಕ್ಷ ರೂಪಾಯಿಗಳು,

ಆ) ಬೆಂಗಳೂರು ನಗರ ಸಭೆಯ ಯೋಜನೆ ವಿಭಾಗದಿಂದ.

ಇ) ಇಲ್ಲಿಯವರೆಗೆ ೧೦೩.೯೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ಈ) ೨¼ ಎಕರೆಗಳು ಇದರ ಬೆಲೆಯನ್ನು ನಿಷ್ಕರ್ಷಿಸಿಲ್ಲ.

ಉ) ಏನೂ ಇಲ್ಲ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಒಂದು ತಾರಾಮಂಡಲ ನಿರ್ಮಾಣಕ್ಕೆ ಎರಡೂವರೆ ಎಕರೆ ಭೂಮಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆ ಜಮೀನಿನ ಮಾಲೀಕರು ಯಾರು ? ತಾರಾಮಂಡಲ ಪೂರ್ಣವಾಗಬೇಕಾದರೆ ಇನ್ನೂ ೬೬ ಲಕ್ಷ ಖರ್ಚು ಮಾಡಬೇಕಾಗಿದೆ. ಆ ಹಣವನ್ನು ಯಾವ ಬಾಬ್ತಿನಿಂದ ಕೊಡುವಿರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಹಣವನ್ನು ನಗರಸಭೆಯಿಂದ ಕೊಡುತ್ತೇವೆ.

ಶ್ರೀ ಎಂ. ಎಸ್. ಪಾಟೀಲ್,—ಜಮೀನಿನ ಬೆಲೆ ಎಷ್ಟಾಯಿತು ? ಯಾರು ಅದರ ಮಾಲೀಕರು

ಶ್ರೀ ಎ. ಲಕ್ಷ್ಮೀಸಾಗರ್.—ಜಮೀನು ಯಾರಿಗೆ ಸೇರಿದ್ದೆನ್ನುವುದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ತರಿಸಿ ಕೊಡುತ್ತೇನೆ,

ಶ್ರೀ ಎಂ. ಎಸ್. ಪಾಟೀಲ್.—ಇದರರ್ಥ ಏನು ಅಧ್ಯಕ್ಷರೆ ? ಜಮೀನಿನ ಮಾಲೀಕರೇ ಗೊತ್ತಿರದೆ ಅಲ್ಲಿ ಕಟ್ಟಡ ಏಳುತ್ತಿದೆ. ಯಾವಾಗ ವಿವರ ಕೊಡುತ್ತಾರೆಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಆದಷ್ಟು ಬೇಗ ತಿಳಿಸುತ್ತೇನೆ.

ವಿಶ್ವೇಶ್ವರಯ್ಯ ಕಬ್ಬಿಣ ಮಂತ್ರಿ ಉಕ್ಕಿನ ಕಾರ್ಖಾನೆಗೆ ಒಂದು ವರ್ಷಕ್ಕೆ ಬೇಕಾಗುವ ಕಬ್ಬಿಣದ ಅದಿರಿನ ಪರಿಮಾಣ.

೯೧೬. ಶ್ರೀ ಮೊಹಮದ್ ಮೊಯಿನುದ್ದೀನ್ (ಚಾಮರಾಜ ಪೇಟೆ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಒಂದು ವರ್ಷಕ್ಕೆ ಬೇಕಾಗುವ ಕಬ್ಬಿಣದ ಅದಿರಿನ ಪರಿಮಾಣ.

ಆ) ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಕಬ್ಬಿಣದ ಅದಿರನ್ನು ಸರಬರಾಜು ಮಾಡುವವರ ವಿವರಣೆಯನ್ನು ಈ ಕೆಳಕಂಡ ನಮೂನೆಯಲ್ಲಿ ಒದಗಿಸಬಹುದು.

ಶ್ರೀ ಜೆ. ಹೆಚ್. ಪಟೇಲ (ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ ೧,೩೦,೦೦೦ ಮೆಟ್ರಿಕ್ ಟನ್‌ಗಳು

ವಿವರಣೆಯನ್ನು ಒಳಗೊಂಡ ವಿವರಣಾ ಪತ್ರವನ್ನು ಲಗತ್ತಿಸಲಾಗಿದೆ.